ದಿನಾಂಕ 09-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ಶ್ರೀ ಆರ್ ಬಿ ಸಿ   ಪ್ರತಿವಾದಿ ಪರ ವಕೀಲರಿಂದ -

ನಾನು ಶಾಲೆ ಕಲಿತಿಲ್ಲ.  ವಾದಿ ಸತ್ಯಪ್ಪ ಕೆಂಚಪ್ಪ ಮಾಳಗೆ ಹೊಲ ಮಾಡಿದ್ದರಿಂದ ಪರಿಚಯ ಇರುತ್ತಾನೆ. ವಾದಿ ಸತ್ಯಪ್ಪನ ಇಬ್ಬರು ಮಕ್ಕಳಿಗೆ ನನ್ನ ತಮ್ಮನ ಇಬ್ಬರು ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ . ವಾದಿಯರು ನಮಗೆ ಬೀಗರು ಆಗಬೇಕು ಎಂದರೆ ಸರಿ .  ವಾದಿ ಸತ್ಯಪ್ಪ ಯಾವ ಸರ್ವೆ ನಂಬರಗೆ ಸಂಬಂಧಿಸಿದಂತೆ  ಹಾದಿ ಸಲುವಾಗಿ ಕೇಸು ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ.  ಸದ್ರಿ ಹೊಲದ ಕ್ಷೇತ್ರ  2 ಎಕರೆ 5 ಗುಂಟೆ ಇರುತ್ತದೆ.  ಈ ಆಸ್ತಿಯ ಸುತ್ತಮುತ್ತ ನಮಗೆ ಸೇರಿದ ಆಸ್ತಿ ಇರುವುದಿಲ್ಲ.

ನನಗೆ ಈ ಕೇಸಿನಲ್ಲಿ ಸಾಕ್ಷಿ ಹೇಳಲು ನ್ಯಾಯಾಲಯದಿಂದ ನೋಟಿಸು ಬಂದಿರುವುದಿಲ್ಲ. ಸರ್ವೆ ನಂ. 179/ಬಿ/3 ಇದು ಕರಗುಪ್ಪಿ ಗ್ರಾಮದ ಪೂರ್ವಕ್ಕೆ ಬರುತ್ತದ ಎಂದರೆ ಸರಿ . ಸದ್ರಿ ಜಮೀನು ಕರಗುಪ್ಪಿ ಸ್ಟೇಷನ ರಸ್ತೆಯ ಉತ್ತರಕ್ಕೆ ಬರುತ್ತದೆ ಎಂದರೆ ಸರಿ. ಸರ್ವೆ ನಂ. 179/ಬಿ/3 ರಲ್ಲಿ ಸಂಪೂರ್ಣವಾಗಿ ಮನೆಗಳನ್ನು ಕಟ್ಟಿರುತ್ತಾರೆ ಎಂದರೆ ಸರಿ . ಸರ್ವೆ ನಂ. 179/ಬಿ/3 ರಲ್ಲಿ ಯಾವುದೇ ಸಾಗುವಳಿ ಜಮೀನು ಇಲ್ಲ ಎಂದರೆ ಸರಿ .

ಸರ್ವೆ ನಂ. 179/2 ಇದು ಮಲ್ಲಪ್ಪನ ಮಕ್ಕಳಾದ ಬಾಳಪ್ಪ ಮತ್ತು ಕರೆಪ್ಪ ಇವರಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ಸರ್ವೆ ನಂ. 179/2 ರ ಜಮೀನಿನಲ್ಲಿ 2 ಗುಂಟೆ ಜಮೀನನ್ನು 2008 ರಲ್ಲಿ 1 ನೇ ಪ್ರತಿವಾದಿಯ ಗಂಡ 2 ನೇ ಪ್ರತಿವಾದಿಯ ತಂದೆ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 179/2 ರಲ್ಲಿ ಪ್ರತಿವಾದಿಯರ ತಂದೆ ಮನೆ ಕಟ್ಟಿರುತ್ತಾರೆ ಎಂದರೆ ಸರಿ . ಸದ್ರಿ ಮನೆಯನ್ನು 2010 ರಲ್ಲಿ ಕಟ್ಟಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರ ಮನೆಯ ಉತ್ತರ ಕಡೆಗೆ ಅಶೋಕ ಮಗೆಣ್ಣವರ, ನೂರಜಾನ ನದಾಫ , ರೇಣುಕಾ ಮಗೆಣ್ಣವರ , ಮಲ್ಲಿಕಾರ್ಜುನ ಜರಳಿ , ಬಾಳಪ್ಪ ಮಾಳಗಿ , ರಸೂಲ ನದಾಫ , ಗೌರವ್ವ ಚೌಗಲಾ , ಕರೆಪ್ಪ ಪೂಜೇರಿ ಇವರ ಮನೆಗಳು ಇರುತ್ತವೆ ಎಂದರೆ ಸರಿ . ಸಾಕ್ಷಿಗೆ 4 ಫೋಟೊಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಅದರಲ್ಲಿ ಪ್ರತಿವಾದಿಯರ ಮನೆ , ಮನೆ ಮುಂದೆ ಕಾಣುವ ರಸ್ತೆ ನೋಡಿ ಗುರುತಿಸಿದ್ದರಿಂದ ಅವುಳನ್ನು ನಿ.ಡಿ-1 ರಿಂದ 4 ಎಂದು ಸಿಡಿಯನ್ನು ನಿ.ಡಿ-5 ಎಂದು ಗುರುತಿಸಲಾಯಿತು. ಪ್ರತಿವಾದಿಯರು ಮನೆ ಕಟ್ಟಿದಾಗಿನಿಂದ ಸ್ಟೇಷನ ಕಡೆಯ ರಸ್ತೆಯಿಂದ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಇದೇ ರಸ್ತೆಯ ಮೂಲಕ 2010 ರಿಂದ ಹೋಗಿ ಬರುವುದು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮೇಲೆ ಹೇಳಿದ ವ್ಯಕ್ತಿಗಳೂ ಸಹ ಇದೇ ರಸ್ತೆಯ ಮೂಲಕ ಓಡಾಡುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಈ ರಸ್ತೆ ಬಿಟ್ಟು ಬೇರೆ ರಸ್ತೆ ಇಲ್ಲ ಎಂದರೆ ಸರಿಯಲ್ಲ. ನಿ.ಡಿ-3 ಮತ್ತು 4 ರಲ್ಲಿ ಕಾಣುವ ರಸ್ತೆ ಮನೆ ಕಟ್ಟಿದ ಸಮಯದಿಂದ ಮಾಡಿದ ರಸ್ತೆ ಎಂದರೆ ಸರಿ . ರಸ್ತೆಯ ಕೆಳಗೆ ಸಣ್ಣ ಕಾಲುವೆ ಇದೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ಗೊತ್ತಿರುತ್ತವೆ. ನಾನೇ ಹೇಳಿ ಬರೆಸಿರುತ್ತೇನೆ. ವಾದಿಯರು ನಮಗೆ ಬೀಗರು ಆಗುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು 2010 ರಲ್ಲಿ ವಿಪಿಸಿ ನಂ. 571/4 ರಲ್ಲಿ ಮನೆ ಕಟ್ಟಿ ಸಧ್ರಿ ರಸ್ತೆಯಲ್ಲಿ ಹೋಗಿ ಬಂದು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರ ರಸ್ತೆ 2010 ರಲ್ಲಿ ಮಾಡಿದ್ದು ಈಗ ಹೊಸ ರಸ್ತೆ ಮಾಡಿಲ್ಲ ಎಂದರೆ ಸರಿ . ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ